ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) 06.02.2005.

ಆ) 9424.

ಇ) 28.02.2005 ರಂದು ಪ್ರಕಟಿಸಲಾಗಿದೆ.

ಈ) 392.

ಉ) 2005ರ ಏಪ್ರಿಲ್ ನಲ್ಲಿ ನಡೆಸಲು ಉದ್ದೇಶಿಸಲಾಗಿದೆ.

2498(1970) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಹಾಗೂ ಆರ್. ಅಶೋಕ್ (ಉತ್ತರಹಳ್ಳಿ):–ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಪ್ರತಿದಿನ ಬರತಕ್ಕ ಸರಾಸರಿ ಹೊರ ಹಾಗೂ ಒಳರೋಗಿಗಳ ಸಂಖ್ಯೆ ಎಷ್ಟು;

ಆ) ಆಸ್ಪತ್ರೆಯಲ್ಲಿ ರೋಗಿಗಳಿಗೆ ವಿಧಿಸುತ್ತಿರುವ ನೋಂದಣಿ ಶುಲ್ಕವೆಷ್ಟು;

ಇ) ನೋಂದಣಿ ಶುಲ್ಕವನ್ನು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿದೆಯೇ;

ಈ) ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳ ಸಂಖ್ಯೆ ಎಷ್ಟು;

ಉ) ಎಲ್ಲಾ ಹಾಸಿಗೆಗಳೂ ಪ್ರತಿದಿನ ಭರ್ತಿಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಹೆಚ್ಚು ರೋಗಿಗಳನ್ನು ಆಕರ್ಷಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಋ) ರೋಗಿಗಳನ್ನು ನೋಡಿಕೊಳ್ಳಲು ಬರತಕ್ಕ ಸಂಬಂಧಿಕರು ಉಳಿದುಕೊಳ್ಳಲು ಧರ್ಮಶಾಲೆ ಇಲ್ಲದೇ ಇರುವುದರಿಂದ ಹೆಚ್ಚು ರೋಗಿಗಳು ಬರದೇ ಇರುವುದಕ್ಕೆ ಒಂದು ಕಾರಣವಲ್ಲವೇ;

ಋೂ) ಹಾಗಿದ್ದಲ್ಲಿ, ಈ ಆಸ್ಪತ್ರೆಯಲ್ಲಿ ಧರ್ಮಶಾಲಾ ಪ್ರಾರಂಭಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) 2004–2005ನೇ ಸಾಲಿನ ವರ್ಷದಂತೆ ಬೆಂಗಳೂರಿಗೆ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಗೆ ಬರತಕ್ಕ ಸರಾಸರಿ ಹೊರರೋಗಿಗಳ ಸಂಖ್ಯೆ: 300 ಮತ್ತು ಒಳರೋಗಿಗಳ ಸಂಖ್ಯೆ: 30.

ಆ) ರೂ.50–00.

ಇ) ಇಲ್ಲ.

ಈ) 530.

ಉ) ಹೌದು, ಖಾಸಗಿ ಆಸ್ಪತ್ರೆಗಳನ್ನು ವೈದ್ಯಕೀಯ ವೆಚ್ಚದ ಮರು ಪಾವತಿಗಾಗಿ ಒಳಪಡಿಸಿರುವುದರಿಂದ ರೋಗಿಗಳ ಸಂಖ್ಯೆ ಇಳಿಮುಖವಾಗಿದೆ.

ಊ) ಯಶಸ್ವಿನಿ, ಪೊಲೀಸ್ ಇಲಾಖೆ, ಸರ್ಕಾರಿ ಕಛೇರಿಗಳಿಗೆ ಪತ್ರ ಹಾಗೂ ಮೌಖಿಕವಾಗಿ ಸಂಪರ್ಕಿಸಿ ಲಭ್ಯವಿರುವ ಸೌಕರ್ಯ ಮತ್ತು ಇತರೆ ಖಾಸಗಿ ಆಸ್ಪತ್ರೆಗಳಿಗಿಂತ ಕಡಿಮೆ ದರದಲ್ಲಿ ನೀಡುತ್ತಿರುವ ಸೌಕರ್ಯವನ್ನು ವಿವರಿಸಲಾಗುತ್ತಿದೆ.

ಋ) 30 ಹಾಸಿಗೆಗಳ ಧರ್ಮಶಾಲೆ ವ್ಯವಸ್ಥೆಯನ್ನು ರೋಗಿಗಳ ಸಹಾಯಕರಿಗೆ ಒದಗಿಸಲಾಗಿದೆ.

ೠ) ಒಳರೋಗಿಗಳ ಸಂಖ್ಯೆಯಲ್ಲಿ ಹೆಚ್ಚಳ ಆದಾಗ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗುವುದು.

2499(1971) ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಹಾಗೂ ಆರ್. ಅಶೋಕ್ (ಉತ್ತರಹಳ್ಳಿ):–ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತಿ ದಿನ ಡಯಾಲಿಸಿಸ್ ಚಿಕಿತ್ಸೆಗಾಗಿ ಬರತಕ್ಕ ಸರಾಸರಿ ರೋಗಿಗಳ ಸಂಖ್ಯೆ ಎಷ್ಟು;

ಆ) ಈ ಆಸ್ಪತ್ರೆಯಲ್ಲಿರುವ ಡಯಾಲಿಸಿಸ್ ಯಂತ್ರಗಳೆಷ್ಟು;

ಇ) ಇವುಗಳಲ್ಲಿ ಪ್ರತಿ ದಿನ ಎಷ್ಟು ಡಯಾಲಿಸಿಸ್ ಉಪಕರಣಗಳು ಕೆಲಸ ನಿರ್ವಹಿಸುತ್ತವೆ;

ಈ) ಕೆಟ್ಟುಹೋಗಿರುವ ಉಪಕರಣಗಳನ್ನು ರಿಪೇರಿ ಮಾಡಿಸಲು ಕೈಗೊಂಡ ಕ್ರಮಗಳೇನು;

ಉ) ಪ್ರತಿ ದಿನ ಸರಾಸರಿ 25–30 ರೋಗಿಗಳಿಗೆ ಚಿಕಿತ್ಸೆ ನೀಡದೆ ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗಲು ಸೂಚಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಖಾಸಗಿ ನರ್ಸಿಂಗ್ ಹೋಂಗೆ ರೋಗಿಗಳನ್ನು ಕಳುಹಿಸುವ ಉದ್ದೇಶದಿಂದಲೇ ಈ ಆಸ್ಪತ್ರೆಯಲ್ಲಿ ಆಗಿಂದಾಗ್ಗೆ ಡಯಾಲಿಸಿಸ್ ಯಂತ್ರಗಳನ್ನು ಕೆಡಿಸುತ್ತಿರುವುದು ನಿಜವಲ್ಲವೇ;

ಋ) ಈ ಆಸ್ಪತ್ರೆಗೆ ಹೆಚ್ಚು ಡಯಾಲಿಸಿಸ್ ಯಂತ್ರಗಳನ್ನು ಒದಗಿಸಲು ಹಾಗೂ ಯಾವುದೇ ರೋಗಿಗಳನ್ನು ಚಿಕಿತ್ಸೆ ನೀಡದೆ ವಾಪಸ್ಸು ಕಳುಹಿಸುವುದನ್ನು ನಿಲ್ಲಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತಿ ದಿನ ಡಯಾಲಿಸಿಸ್ ಚಿಕಿತ್ಸೆಗಾಗಿ 8–10 ರೋಗಿಗಳು ಬರುತ್ತಾರೆ.

ಆ) 8 ಡಯಾಲಿಸಿಸ್ ಉಪಕರಣಗಳಿವೆ.

ಇ) 6 ಡಯಾಲಿಸಿಸ್ ಉಪಕರಣಗಳು ಕಾರ್ಯ ನಿರ್ವಹಿಸುತ್ತಿವೆ.

ಈ) ಕೆಟ್ಟುಹೋಗಿರುವ ಎರಡು ಉಪಕರಣಗಳನ್ನು ದುರಸ್ಥಿಗೊಳಿಸಲು ವೆಚ್ಚ ಹೆಚ್ಚೆಂದು ಕಂಡು ಬಂದಿರುವುದರಿಂದ ಸಂಸ್ಥೆಯವರೊಡನೆ ದರಗಳ ಬಗ್ಗೆ ಸಮಾಲೋಚಿಸಲಾಗುತ್ತಿದೆ.

ಉ) ಇಲ್ಲ.